**ಓ.ಎಸ್. ನಂ.113/2014** **ಪಿಡಬ್ಲ್ಯೂ: 1**

**ದಿನಾಂಕ 18.03.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಶ್ರೀ ಕೆ.ಆರ್.ಕೆ. 3ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಪಿ.ಯು.ಸಿ. ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈ ಹಿಂದೆ ಸರ್ಕಾರಿ ನೌಕರನಾಗಿರುತ್ತೇನೆ. ಆಸ್ತಿ ನಂಬರ್ 74 ರ ಮಂಚಯ್ಯ ಬಿನ್ ದುರಯ್ಯರವರು ನಮ್ಮ ತಂದೆ. ನಮ್ಮ ತಂದೆಗೆ 1976-77ನೇ ಸಾಲಿನಲ್ಲಿ ಆಸ್ತಿ ಮಂಜೂರಾಗಿರುತ್ತದೆ. ಸದರಿ ಆಸ್ತಿಯಲ್ಲಿ ಈಗಲೂ ನಾನು ವಾಸವಾಗಿರುತ್ತೇನೆ. ನಮ್ಮ ತಂದೆಗೆ ನಾವು 4 ಜನ ಮಕ್ಕಳು. ಅವರುಗಳೆಂದರೆ 1ನೇ ನಿಂಗರಾಜು, 2ನೇ ಶಾಂತರಾಜು, 3ನೇಯವರು ದೇವರಾಜು, 4ನೇಯವರು ಸುರೇಶ್ ಕುಮಾರ್ ಆಗಿರುತ್ತೇವೆ. ನಮ್ಮ ತಂದೆಯವರು ಸರ್ಕಾರಿ ನೌಕರರಾಗಿದ್ದರು. ನನಗೆ ಈಗ 71 ವರ್ಷ ವಯಸ್ಸು. 1975-76 ರಲ್ಲಿ ದಾವಾ ಆಸ್ತಿ ಮಂಜೂರಾದಾಗ ನನಗೆ 25 ವರ್ಷ ವಯಸ್ಸಾಗಿತ್ತು. ದಾವಾ ಆಸ್ತಿಯನ್ನು ಮಂಜೂರಾತಿ ಮಾಡಲು ಸರ್ಕಾರಕ್ಕೆ ನಾನು ಮನವಿ ನೀಡಿರುತ್ತೇನೆ. ದಾವಾ ಆಸ್ತಿಯು ಬಡತನ ರೇಖೆಗಿಂತ ಕೆಳಗಿದ್ದ ಕುಟುಂಬಗಳಿಗೆ ಹಂಚಿಕೆ ಮಾಡಿರುವಂತಹ ನಿವೇಶನ ಎಂದರೆ ಸರಿ. ನಾನು ಸರ್ಕಾರಿ ನೌಕರನಾಗಿದ್ದರಿಂದ ನನಗೆ ಯಾವುದೇ ನಿವೇಶನ ಹಂಚಿಕೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಿವೇಶನ ಮಂಜೂರು ಮಾಡುವ ಸಂದರ್ಭದಲ್ಲಿ ನಾನು ನಿರುದ್ಯೋಗಿಯಾಗಿದ್ದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ಖಾಲಿ ನಿವೇಶನ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮಧುವನಹಳ್ಳಿ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿ ಹಾಗೂ ನಿವೇಶನ ಸಂಖ್ಯೆ 100 ಮತ್ತು 102 ಸಾರ್ವಜನಿಕ ಉದ್ದೇಶಕ್ಕೆ ಬಳಸಲು ಮೀಸಲಿಡಲಾಗಿತ್ತು ಎಂದರೆ ಸರಿಯಲ್ಲ. ದಿನಾಂಕ 28.12.1999 ರಂದು 3ನೇ ಪ್ರತಿವಾದಿಯಿಂದ ಕಟ್ಟಡ ನಿರ್ಮಾಣ ಮಾಡಲು ಪರವಾನಿಗೆ ಪಡೆದುಕೊಂಡಿರುತ್ತೇನೆ. 2ನೇ ಪ್ರತಿವಾದಿ ಕಚೇರಿಯಿಂದ ದಾವಾ ಆಸ್ತಿಯ ಮಂಜೂರಾತಿಯನ್ನು ರದ್ದುಪಡಿಸಲು ನನಗೆ ನೋಟೀಸು ನೀಡಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಂಜೂರಾತಿಯನ್ನು ರದ್ದುಪಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನಾನುಭವದಲ್ಲಿ ಇಲ್ಲದೇ ಇದ್ದರೂ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಸ್ವಾಧೀನಕ್ಕೆ ತೊಂದರೆ ನೀಡಿರುವ ಕುರಿತು ಯಾವುದೇ ಪೊಲೀಸ್ ದೂರು ನೀಡಿರುವುದಿಲ್ಲ. ಸಾರ್ವಜನಿಕ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮಂಜೂರಾಗಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ದಾವೆಯನ್ನು ಸಲ್ಲಿಸುವ ಸಲುವಾಗಿ ನಾನು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ನ್ನು ಅಧಿಕಾರಿಗಳ ಜೊತೆ ಸಾಮೀಲಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ